**(ಇಂದು ದಿನಾಂಕಃ 15-05-2026 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಂದುವರಿದ ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಮಾನ್ಯ VVC ವಕೀಲರಿಂದ** :

ನಾನು 06-02-2026 ರಂದು ನುಡಿದ ಸಾಕ್ಷಿ ಹೇಳಿಕೆಯಲ್ಲಿ ದಿನಾಂಕ 07-10-2019 ರಿಂದ 28-09-2021 ರ ವರೆಗೆ ಚಿಂಚೋಳಿ ಪೋಲೀಸ ಠಾಣೆಯಲ್ಲಿ ಆರಕ್ಷಕ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ ಎಂದು ನಜರು ಚೌಕಿನಿಂದ ದಿನಾಂಕ ತಪ್ಪಾಗಿ ಹೇಳಿರುತ್ತೇನೆ. ನಾನು ದಿನಾಂಕ 20-12-2019 ರಿಂದ ದಿನಾಂಕ 24-01-2021 ರ ವರೆಗೆ ಚಿಂಚೋಳಿ ಪೋಲೀಸ ಠಾಣೆಯಲ್ಲಿ ಆರಕ್ಷಕ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಅಪಘಾತವಾದ ಸಮಯದಲ್ಲಿ ಅಪಘಾತ ಪಡಿಸಿದ ಆರೋಪಿತನು ಸ್ಥಳದಲ್ಲಿ ಹಾಜರಿದ್ದ ಬಗ್ಗೆ ದಾಖಲಾತಿಗಳಾಲಿ, ಪ್ರತ್ಯಕ್ಷ ಸಾಕ್ಷಿ ಹೇಳಿಕೆಗಳಾಗಲಿ, ನನ್ನ ತನಿಖಾ ವರದಿಯಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತನು ಅಪಘಾತ ಸ್ಥಳದಲ್ಲಿ ಇದ್ದ ಬಗ್ಗೆ ತೋರಿಸಲು ಮೊಬೈಲ್ ಲೋಕೇಷನ್ CDR ದಾಖಲಾತಿಯನ್ನು ಸಲ್ಲಿಸಿಲ್ಲ ಎಂದರೆ ಈ ಪ್ರಕರಣವು ಅಘೋರ ಪ್ರಕರಣವಾಗಿದ್ದರಿಂದ CDR ದಾಖಲಾತಿಯನ್ನು ಸಲ್ಲಿಸಿರುವುದಿಲ್ಲ.

ದೂರನ್ನು 41 ದಿನಗಳ ವಿಳಂಬವಾಗಿ ದಾಖಲಿಸಿರುತ್ತೇನೆ ಎಂದರೆ ಗಾಯಾಳು ಸುಮಾರು 4 ಆಸ್ಪತ್ರೆಗಳಿಗೆ ತೋರಿಸಿಕೊಂಡು ಸುಧಾರಿಸಿಕೊಂಡು ಬಂದ ನಂತರ ದೂರನ್ನು ನೀಡಿದ್ದರಿಂದ ದಾಖಲಿಸಲು ವಿಳಂಬವಾಗಿರುತ್ತದೆ. ಆ ಬಗ್ಗೆ ಕಾರಣವನ್ನು ನನ್ನ ಪ್ರ.ವ.ವರದಿಯಲ್ಲಿ ನಮೂದು ಮಾಡಿರುತ್ತೇನೆ. ಈ ಪ್ರಕರಣದಲ್ಲಿ ಯಾವುದೇ ರೀತಿ MLC ಮತ್ತು ಪ್ರತ್ಯಕ್ಷ ಸಾಕ್ಷಿ ಹೇಳಿಕೆ ಇಲ್ಲದೆ ತನಿಖೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆದರೆ MLC ಸಲ್ಲಿಸಿರುವುದಿಲ್ಲ. ಗಾಯದ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ದೂರನ್ನು ದಾಖಲಿಸುವುದಕ್ಕಿಂತ ಮುಂಚೆ ನಮ್ಮ ಠಾಣೆಗೆ MLC ಮೆಸೇಜ್ ಬಂದ ಬಗ್ಗೆ ಮಾಹಿತಿ ಇರುವುದಿಲ್ಲ. ನಾನು ಮತ್ತು ಗಾಯಾಳು ಸೇರಿಕೊಂಡು ಗಾಯಾಳುವಿಗೆ ಸಹಾಯ ಮಾಡಲು ಸುಳ್ಳು ದೂರನ್ನು ದಾಖಲಿಸಿ, ಸುಳ್ಳು ತನಿಖಾ ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ:</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)**

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.